# ಭಗವದ್ದರ್ಶನ



❁ ಒಮ್ಮೆ ಏನಾದರೂ ಬ್ರಹ್ಮಾನಂದ ದೊರೆತುದೇ ಆದರೆ ಇಂದ್ರಿಯ ಸುಖಗಳನ್ನು ಭೋಗಿಸಲಿಕ್ಕೇ ಆಗಲಿ ಅಥವಾ ಹೆಸರು ಕೀರ್ತಿ ಐಶ್ವರ್ಯಗಳನ್ನು ಪಡೆಯುವುದಕ್ಕೇ ಆಗಲಿ ಮನಸ್ಸು ಓಡಿಹೋಗದು. ದೀಪದ ಚಿಟ್ಟೆ ಒಮ್ಮೆ ಬೆಳಕನ್ನು ಕಂಡಿತು ಅಂದರೆ ಅದು ಎಂದಿಗೂ ಕತ್ತಲೆ ಕಡೆ ಹಾರಿಹೋಗುವುದಿಲ್ಲ.

❁ ಸಂಸಾರಾಸಕ್ತಿಯನ್ನು ನಿರ್ಮೂಲ ಮಾಡುವುದಕ್ಕೆ ಸಾಧನೆ ಭಜನೆಯನ್ನು ಮಾಡುವುದು. ಭಗವಂತನ ಚಿಂತನೆ ಹೆಚ್ಚುಹೆಚ್ಚಿದಂತೆಲ್ಲ ಸಂಸಾರದ ಸಾಮಾನ್ಯ ವಸ್ತುಗಳ ಭೋಗಾಸಕ್ತಿ ಕಡಿಮೆ ಕಡಿಮೆ ಯಾಗುತ್ತಾ ಬರುತ್ತದೆ. ಆತನ ಪಾದಪದ್ಮಗಳ ಕಡೆ ಭಕ್ತಿ ಎಷ್ಟು ಪ್ರಮಾಣದಲ್ಲಿ ಬೆಳೆಯುವುದೊ ಅಷ್ಟೇ ಪ್ರಮಾಣದಲ್ಲಿ ವಿಷಯಾಸಕ್ತಿ ಕಡಿಮೆ ಕಡಿಮೆಯಾಗುತ್ತಾ ಬರುತ್ತದೆ. ಅಷ್ಟೇ ಪ್ರಮಾಣದಲ್ಲಿ ದೇಹಸುಖದ ಕಡೆ ಹಾತೊರೆಯುವುದು ಕಡಿಮೆ ಕಡಿಮೆ ಯಾಗುತ್ತಾ ಬರುತ್ತದೆ.

❁ ಜ್ಞಾನ ಪಡೆದ ನಂತರವೂ ಜ್ಞಾನಿಯ ಶರೀರ ಎಂದಿನಂತೆ ಉಳಿದುಕೊಳ್ಳುತ್ತದೆ. ಆದರೆ ಜ್ಞಾನಾಗ್ನಿಯಲ್ಲಿ ಕಾಮಾದಿ ರಿಪುಗಳು ದಗ್ಧವಾಗಿ ಹೋಗಿರುತ್ತವೆ. ಅನೇಕ ದಿವಸಗಳ ಹಿಂದೆ ಬಹಳ ಬಿರುಮಳೆ ಬಂದು ಕಾಳೀದೇವಾಲಯಕ್ಕೆ ಸಿಡಿಲು ಬಡಿಯಿತು. ನಾವೆಲ್ಲರೂ ಹೋಗಿ ನೋಡಿದೆವು. ಬಾಗಿಲುಗಳಿಗೆ ಯಾವ ಅಪಾಯವೂ ಆಗಿರಲಿಲ್ಲ. ಆದರೆ ಸ್ಕ್ರೂ ಮೊಳೆಗಳ ತಲೆಗಳೆಲ್ಲಾ ಹಾರಿಹೋಗಿದ್ದವು. ಬಾಗಿಲುಗಳೇ ಶರೀರ, ಕಾಮಾದಿ ಆಸಕ್ತಿಗಳೇ ಸ್ಕ್ರೂ ಮೊಳೆಗಳು.

❁ ಜ್ಞಾನಿಗೆ ಕೇವಲ ಭಗವಂತನ ಭಾವನೆಗಳೇ ರುಚಿಸುತ್ತವೆ. ವಿಷಯವಸ್ತುಗಳ ಮಾತುಕತೆ ಆತನ ಮನಸ್ಸಿಗೆ ಬಹಳವಾಗಿ ಕಷ್ಟವನ್ನುಂಟುಮಾಡುತ್ತವೆ. ವಿಷಯಾಸಕ್ತರು ಬೇರೆ ಗುಂಪಿಗೆ ಸೇರಿದವರು. ಅವರ ಅವಿದ್ಯೆಯ ರುಮಾಲು ಇನ್ನೂ ಕಳಚಿ ಬಿದ್ದಿಲ್ಲ. ಅದಕ್ಕಾಗಿಯೆ ಅವರು ಅಲ್ಲಿ ಇಲ್ಲಿ ಸುತ್ತಿ ಮತ್ತೆ ಮತ್ತೆ ವಿಷಯ ವಸ್ತುಗಳ ಮಾತುಗಳನ್ನೇ ಎತ್ತುತ್ತಾರೆ.

❁ ಜ್ಞಾನ ಪಡೆದುಕೊಂಡ ಮೇಲೆ ಬೇರೆ ಲೋಕಕ್ಕೆ ಹೋಗಬೇಕಾಗಿಲ್ಲ. ಪುನರ್ಜನ್ಮ ಉಂಟಾಗುವುದಿಲ್ಲ. ಆದರೆ ಎಲ್ಲಿಯವರೆಗೆ ಜ್ಞಾನವನ್ನು ಪಡೆದುಕೊಂಡಿಲ್ಲವೊ, ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡಿಲ್ಲವೊ, ಅಲ್ಲಿಯವರೆಗೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. ಅದರಿಂದ ಬಿಡುಗಡೆ ಎಂಬುದು ಇಲ್ಲವೇ ಇಲ್ಲ. ಅದುವರೆಗೆ ಪರಲೋಕ ಎಂಬುದು ಇದ್ದೇ ಇದೆ. ಜ್ಞಾನ ದೊರೆತರೆ, ಭಗವಂತನ ದರ್ಶನ ದೊರೆತರೆ, ಮುಕ್ತಿ ದೊರೆತುಬಿಡುತ್ತದೆ — ಬಳಿಕ ಪುನರ್ಜನ್ಮವಿಲ್ಲ. ಬೇಯಿಸಿದ ಭತ್ತವನ್ನು ಬಿತ್ತಿದರೆ ಅದು ಮೊಳೆಯದು. ಯಾರಾದರೂ ಜ್ಞಾನಾಗ್ನಿಯಲ್ಲಿ ಬೆಂದುಹೋಗಿ ಬಿಟ್ಟಿರುವುದಾದರೆ ಅವರಿಂದ ಸೃಷ್ಟಿಯ ಯಾವ ಕಾರ್ಯವೂ ನಡೆಯದು. ಅವರ ಕೈಯಲ್ಲಿ ಸಂಸಾರಕಾರ್ಯ ಸಾಧ್ಯವಿಲ್ಲ; ಅವರಿಗೆ ಕಾಮ-ಕಾಂಚನದಲ್ಲಿ ಆಸಕ್ತಿಯೂ ಇರದು. ಆಗಲೇ ಭತ್ತ ಬೆಂದು ಹೋಗಿಬಿಟ್ಟಿದೆ, ಅದನ್ನು ತೆಗೆದುಕೊಂಡು ಹೋಗಿ ಒಟ್ಟಲು ಹಾಕಿದರೆ ಏನು ಹುಟ್ಟುತ್ತದೆ?

❁ ನಿಜವಾಗಿ ಭಗವಂತನ ದರ್ಶನ ಆಗಿದೆಯೊ ಇಲ್ಲವೊ ಎಂಬುದನ್ನು ಅರಿಯಲು ಕೆಲವು ಲಕ್ಷಣಗಳಿವೆ. ಅವುಗಳಲ್ಲಿ ಒಂದು ಆನಂದ; ಸಂಕೋಚವಿರದು. ಆತನನ್ನು ಸಮುದ್ರಕ್ಕೆ ಹೋಲಿಸಬಹುದು; ಮೇಲೆ ಅಲ್ಲೋಲಕಲ್ಲೋಲ. ಆಂತರ್ಯದಲ್ಲಿ ಗಂಭೀರ ಜಲ. ಯಾರಿಗೆ ಭಗವಂತನ ದರ್ಶನ ದೊರೆತಿದೆಯೊ ಆತ ಕೆಲವು ವೇಳೆ ಹುಚ್ಚನ ಹಾಗೆ; ಕೆಲವು ವೇಳೆ ಪಿಶಾಚಿಯ ಹಾಗೆ — ಶುಚಿ ಅಶುಚಿ ಎಂಬ ಭೇದಜ್ಞಾನವಿಲ್ಲದೆ; ಕೆಲವು ವೇಳೆ ಜಡನ ಹಾಗೆ ಒಳಗೆ ಹೊರಗೆ ಎಲ್ಲೆಲ್ಲೂ ಭಗವಂತನನ್ನು ನೋಡುತ್ತಿರುವುದರಿಂದ ಸ್ತಂಭೀಭೂತನಾಗಿ; ಕೆಲವು ವೇಳೆ ಬಾಲಕನ ಹಾಗೆ — ಯಾವ ಆಸಕ್ತಿಯೂ ಇಲ್ಲದೆ ಕಂಕುಳಲ್ಲಿ ಬಟ್ಟೆ ಇಟ್ಟುಕೊಂಡು ಸುತ್ತಾಡುವ ಮಕ್ಕಳ ಹಾಗೆ ಇರುತ್ತಾನೆ. ಈ ಅವಸ್ಥೆಯಲ್ಲಿ ಕೆಲವು ವೇಳೆ ಬಾಲಭಾವದಿಂದ ಹುಡುಗಾಟವಾಡುತ್ತ; ಕೆಲವು ವೇಳೆ ಯುವಕಭಾವದಿಂದ ಕೆಲಸ ಮಾಡುತ್ತ, ಲೋಕಶಿಕ್ಷಣ ಮಾಡುತ್ತ ಇರುತ್ತಾನೆ.

❁ ಯಾರಿಗೆ ಬ್ರಹ್ಮಜ್ಞಾನ ದೊರೆತಿರುವುದೊ, ಆತ ಜೀವನ್ಮುಕ್ತ. ಆತನಿಗೆ ಚೆನ್ನಾಗಿ ಗೊತ್ತಿದೆ, ಶರೀರ ಪ್ರತ್ಯೇಕ, ಆತ್ಮ ಪ್ರತ್ಯೇಕ ಅಂತ. ಭಗವಂತನ ದರ್ಶನವಾದ ಮೇಲೆ ದೇಹಾತ್ಮಬುದ್ಧಿ ಇರದು. ನೀರು ಇಂಗಿಹೋದ ತೆಂಗಿನಕಾಯಿಯಲ್ಲಿ ತಿರುಳು ಪ್ರತ್ಯೇಕವಾಗಿ ಕರಟ ಪ್ರತ್ಯೇಕವಾಗಿ ಇರುವಂತೆ ಇವೆರಡೂ ಪ್ರತ್ಯೇಕ ಪ್ರತ್ಯೇಕ. ಆತ್ಮ ದೇಹದೊಳಗೆ 'ಗಡಗಡ' ಅಂತ ಅಳ್ಳಾಡುತ್ತಿರುವುದೊ ಏನೊ ಎಂಬಂತೆ ಕಂಡುಬರುತ್ತದೆ. ವಿಷಯಬುದ್ಧಿ ಎಂಬ ನೀರು ಇಂಗಿಹೋಯಿತು ಎಂದರೆ ಆತ್ಮಜ್ಞಾನ ದೊರಕುತ್ತದೆ; ಆತ್ಮ ಪ್ರತ್ಯೇಕ, ದೇಹ ಪ್ರತ್ಯೇಕ ಎಂಬ ಬೋಧೆಯಾಗುತ್ತದೆ. ಹಸಿಯ ಅಡಕೆ ಅಥವಾ ಹಸಿಯ ಬಾದಾಮಿ ಒಳಗಿರುವ ಅಡಕೆಯನ್ನು ಅಥವಾ ಬಾದಾಮಿಯನ್ನು ಅವುಗಳ ಸಿಪ್ಪೆಯಿಂದ ಪ್ರತ್ಯೇಕಪಡಿಸಲಾಗುವುದಿಲ್ಲ; ಆದರೆ ಅವು ಹಣ್ಣಾದಾಗ ಅಡಕೆ ಮತ್ತು ಬಾದಾಮಿ ಪ್ರತ್ಯೇಕವಾಗಿ, ಅವುಗಳ ಸಿಪ್ಪೆ ಪ್ರತ್ಯೇಕವಾಗಿ ಆಗಿಬಿಡುತ್ತವೆ. ಹಣ್ಣಾದಾಗ ರಸ ಇಂಗಿಹೋಗಿಬಿಡುತ್ತದೆ. ಬ್ರಹ್ಮಜ್ಞಾನ ದೊರೆತರೆ ವಿಷಯರಸ ಇಂಗಿಹೋಗಿಬಿಡುತ್ತದೆ.

*ಶ್ರೀರಾಮಕೃಷ್ಣ ವಚನವೇದದಿಂದ*